ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

೧೮.೯.೧೯೧೨ (ರಾಧಾಷ್ಟಮಿಯ ದಿವಸ)

(ಶ್ರೀಮಾತೆಯವರು ಗಂಗಾಸ್ನಾನ ಮಾಡಿಕೊಂಡು ಬಂದಿದ್ದಾರೆ.)

ಮನೆಗೆ ಬಂದು ಹಾಸಿಗೆಯ ಮೇಲೆ ಕುಳಿತುಕೊಂಡು ನನ್ನನ್ನು ನೋಡಿ, "ಗಂಗಾಸ್ನಾನ ಸಹ ಮಾಡಿ ಬಂದಿದ್ದೇನೆ" ಎಂದರು. ಅವರ ಪಾದಪದ್ಮಗಳನ್ನು ಪೂಜಿಸುವ ನನ್ನ ಅಂತರಂಗದ ಆಸೆಯನ್ನು ತಿಳಿದು ಈ ರೀತಿ ಹೇಳುತ್ತಿದ್ದಾರೆ. ನಾನು ಮನಸ್ಸಿನಲ್ಲಿಯೇ ಅಂದುಕೊಂಡೆ, "ನಿತ್ಯಶುದ್ಧಳು ನೀನು, ನಿನಗೆ ಗಂಗಾಸ್ನಾನ ಬೇರೆ ಜೇಕೆ?" ತಕ್ಷಣ ಗಂಧ ಮತ್ತು ಪುಷ್ಪಗಳನ್ನು ತಂದು ಅವರ ಪಾದದ ಬಳಿ ಕುಳಿತುಕೊಂಡೆ. ಶ್ರೀಮಾತೆ ಹೇಳಿದರು, "ತುಳಸಿ ಎಲೆ ಇದ್ದರೆ ಕಾಲಿಗೆ ತಗುಲಿಸಬೇಡ." ತುಂಬು ಮನಸ್ಸಿನಿಂದ ಪೂಜೆ ಮಾಡಿ, ನಮಸ್ಕರಿಸಿ ಎದ್ದೆ.

ಶ್ರೀಮಾತೆಯವರು ಪ್ರಸಾದ ತೆಗೆದುಕೊಳ್ಳಲು ಕುಳಿತರು. ನನ್ನನ್ನು ಕರೆದು, ಪಕ್ಕದಲ್ಲಿಯೇ ಕುಳಿತುಕೊಳ್ಳುವಂತೆ ಹೇಳಿದರು. ಪ್ರತಿಯೊಂದು ಪದಾರ್ಥದಲ್ಲೂ ಅರ್ಧದಷ್ಟನ್ನು ನನಗೂ ಕೊಡಲಾರಂಭಿಸಿದರು. ನಾನೂ ಸಹ ಆನಂದದಿಂದ ಪ್ರಸಾದ ಸ್ವೀಕರಿಸಿದೆ. ಪ್ರಸಾದವಿದ್ದ ಮುತ್ತುಗದ ಊಟದೆಲೆಯನ್ನು ಕಂಡು ಹೇಳಿದೆ: "ಅಮ್ಮಾ, ಈ ಎಲೆ ನೋಡಿದರೆ ನಾಗ ಮಹಾಶಯರ ನೆನಪು ಬರುತ್ತದೆ." ಶ್ರೀಮಾತೆ ನುಡಿದರು: "ಆಹಾ! ಎಂಥ ಭಕ್ತಿ! ಒಣಗಿದ ಎಲೆ ಯಾರಾದರೂ ತಿನ್ನುತ್ತಾರೆಯೇ? ಭಕ್ತಿಯ ಆಧಿಕ್ಯದಿಂದ ಪ್ರಸಾದವನ್ನಿಟ್ಟ ಎಲೆಯನ್ನೂ ತಿನ್ನುವುದೇ! ಆಹಾ! ಅವನದು ಎಂತಹ ಪ್ರೇಮದ ಕಣ್ಣುಗಳು! ಅವು ಯಾವಾಗಲೂ ಅಶ್ರುಗಳಿಂದ ತುಂಬಿರುತ್ತಿದ್ದವು. ಕಠೋರ ತಪಸ್ಸಿನಿಂದಾಗಿ ಆತನ ಶರೀರ ಒಣಗಿಹೋಗಿತ್ತು. ಓಹ್! ನನ್ನನ್ನು ನೋಡಲು ಬಂದಾಗ, ಆವೇಶಭರಿತನಾಗಿದ್ದ ಅವನಿಗೆ ಮೆಟ್ಟಿಲು ಕೂಡ ಹತ್ತಲು ಕಷ್ಟವಾಗುತ್ತಿತ್ತು, ಮೈಯೆಲ್ಲ ನಡುಗುತ್ತಿತ್ತು. ಎಲ್ಲಿ ಕಾಲಿಟ್ಟರೆ, ಅಲ್ಲಿ ಬೀಳುತ್ತಿದ್ದನು. ಈ ರೀತಿಯ ಭಕ್ತಿಭಾವವನ್ನು ನಾನೆಂದೂ ನೋಡಿಲ್ಲ." ಆಗ ನಾನೆಂದೆ: "ನಾಗ ಮಹಾಶಯರು ವೈದ್ಯವೃತ್ತಿ ಬಿಟ್ಟು ಸದಾಕಾಲವೂ ಶ್ರೀರಾಮಕೃಷ್ಣರ ಧ್ಯಾನ, ಚಿಂತನೆಯಲ್ಲಿ ತೊಡಗಿದ್ದರು. ಅದನ್ನು ಕಂಡು ಅವರ ತಂದೆ ನಿರಾಸಕ್ತಿಯಿಂದ, 'ಈಗ ಏನು ಮಾಡುತ್ತೀಯೆ? ಬೆತ್ತಲೆಯಾಗಿ, ಸತ್ತ ಕಪ್ಪೆಯನ್ನು ತಿಂದು ಜೀವನಯಾಪನೆ ಮಾಡುವೆಯಂತೆ!' ಎಂದರಂತೆ. ಆಗ ಪಡಸಾಲೆಯಲ್ಲಿ ಒಂದು ಸತ್ತ ಕಪ್ಪೆ ಬಿದ್ದುಕೊಂಡಿತ್ತು. ಅದನ್ನು ಕಂಡ ತಕ್ಷಣ ಉಟ್ಟ ಬಟ್ಟೆಯನ್ನು ಬಿಚ್ಚಿಸೆದು, ಆ ಕಪ್ಪೆಯನ್ನು ತಿಂದುಬಿಟ್ಟರಂತೆ! ಬಳಿಕ ತಂದೆಯ ಬಳಿಗೆ ಬಂದು, 'ನಿಮ್ಮ ಎರಡೂ ಆದೇಶಗಳನ್ನು ನಾನು ಪಾಲಿಸಿದ್ದೇನೆ. ಈಗ ನನ್ನ ಊಟವಸತಿಗಳ ಬಗ್ಗೆ ಚಿಂತಿಸದೆ. ಇಷ್ಟ ಮಂತ್ರ ಜಪಿಸಿ' ಎಂದರಂತೆ. ಈ ರೀತಿ ನಾನು ಪುಸ್ತಕದಲ್ಲಿ ಓದಿದ್ದೇನೆ."

ಶ್ರೀಮಾತೆ ಹೇಳಿದರು: "ಒಮ್ಮೆ ಒಂದು ಪುಣ್ಯದಿನದಂದು ಕೊಲ್ಕತಾದಿಂದ ನಾಗಮಹಾಶಯ ತನ್ನ ಸ್ವಗ್ರಾಮಕ್ಕೆ ಹಿಂತಿರುಗಿದನು. ಇದನ್ನು ಕಂಡು ಅವರ ತಂದೆ, 'ಎಂಥಾ ಮೂರ್ಖ ನೀನು, ಪುಣ್ಯದಿನದಂದು ಗಂಗಾಸ್ನಾನ ಮಾಡದೆ ಗಂಗೆಯ ಪ್ರದೇಶದಿಂದ ಇಲ್ಲಿಗೆ ಹಿಂತಿರುಗಿ ಬಂದಿರುವೆಯಲ್ಲ.' ಎಂದರು. ಆಶ್ಚರ್ಯವೆಂಬಂತೆ, ಮನೆಯ ಪಡಸಾಲೆಯ ನೆಲ ಬಿರಿದು, ನೀರು ಬುಗ್ಗೆಯಾಗಿ ಹರಿದು ಪ್ರಾಂಗಣ ತುಂಬಿತಂತೆ! ಆಗ ನಾಗ ಮಹಾಶಯ 'ಬಾ ತಾಯಿ ಗಂಗೆ ಬಾ' ಎಂದು ಎರಡೂ ಕೈಗಳಲ್ಲಿ ನೀರನ್ನು ತೆಗೆದುಕೊಂಡು, ತಲೆಯ ಮೇಲೆ ಚಿಮುಕಿಸಿಕೊಂಡನಂತೆ. ಇದನ್ನು ಕಂಡು, ಅವರ ಮನೆಯಿದ್ದ ಓಣಿಯ ಇತರರೂ ಕೂಡ ಆ ನೀರಿನಲ್ಲಿಯೇ ಸ್ನಾನ ಮಾಡಿದರಂತೆ." ಶ್ರೀಮಾತೆಯವರು ಮುಂದುವರಿದು ಹೇಳಿದರು: "ಆಹಾ! ಆತನ ಭಕ್ತಿಯ ಪ್ರಭಾವದಿಂದ ಅಸಾಧ್ಯವೂ ಸಾಧ್ಯವಾಯಿತು. ನಾನು ಒಂದು ಉತ್ತರೀಯವನ್ನು ಕೊಟ್ಟೆ. ಅದನ್ನು ಆತನು ತಲೆಗೆ ಸುತ್ತಿಕೊಂಡು ತಿರುಗುತ್ತಿದ್ದ. ಆತನ ಮಡದಿ ಕೂಡ ಒಳ್ಳೆಯ ಭಕ್ತೆ. ಈಗಲೂ ಇದ್ದಾಳೆ. ಕೆಲವು ದಿನಗಳ ಹಿಂದೆ, ಕಳೆದ ಬೇಸಿಗೆಯಲ್ಲಿ ಇಲ್ಲಿಗೆ ಬಂದಿದ್ದಳು."

ಕೆಲವು ಭಕ್ತರು ಬಂದರು. ಹೀಗಾಗಿ ನಮ್ಮ ಮಾತುಕತೆ ಅಲ್ಲಿಗೇ ನಿಂತಿತು. ಶ್ರೀಮಾತೆಯವರು ನನಗೆ ವೀಳ್ಯವನ್ನು ತಯಾರಿಸಲು ಹೇಳಿ, ಎದ್ದು ನಿಂತು, ಆ ಭಕ್ತರ ನಮಸ್ಕಾರ ಸ್ವೀಕರಿಸಿದರು. ಸ್ವಲ್ಪ ಸಮಯದ ನಂತರ ಎರಡು ವೀಳ್ಯಗಳನ್ನು(ಪಾನ್) ತಂದು ಶ್ರೀಮಾತೆಯವರಿಗೆ ಕೊಟ್ಟೆ. ಅವರು ಒಂದನ್ನು ತಿಂದು, ಮತ್ತೊಂದನ್ನು ನನಗೆ ಕೊಟ್ಟರು. ನಾನು ಹಿಂತಿರುಗಿ ಬಂದು ನನ್ನ ಕೆಲಸದಲ್ಲಿ ತೊಡಗಿದೆ. ಬಳಿಕ ಇಬ್ಬರು ಸ್ತ್ರೀಭಕ್ತರ ಸಹಿತ ಶ್ರೀಮಾತೆಯವರು ಒಳಗೆ ಬಂದರು. ಅವರೂ ಕೂಡ ಸಹಾಯ ಮಾಡಿದ್ದರಿಂದ, ಕೆಲಸ ಬೇಗ ಮುಗಿಯಿತು. ಶ್ರೀಮಾತೆ ದೇವರಿಗಾಗಿ ಕೆಲವು ವೀಳ್ಯಗಳನ್ನು ಬೇರೆ ಕಡೆ ತೆಗೆದಿಟ್ಟರು. "ನನ್ನ ಮುದ್ದು ಮಕ್ಕಳು ಕೆಲಸ ಎಷ್ಟು ಬೇಗ ಮುಗಿಸಿಬಿಟ್ಟಿದ್ದಾರೆ" ಎಂದುಕೊಳ್ಳುತ್ತ ಆನಂದಪಟ್ಟರು. (ಮುಂದುವರಿಯುವುದು)

ವಿವೇಕಪ್ರಭ ಪತ್ರಿಕೆಗೆ ಲೇಖನಗಳನ್ನು ಬರೆದು ಕಳಿಸಬಹುದು. ಲೇಖನಗಳು ಧರ್ಮ, ಸಂಸ್ಕೃತಿ, ಮೌಲ್ಯಶಿಕ್ಷಣ, ಆಧ್ಯಾತ್ಮಿಕ ಸಾಧನೆ, ವ್ಯಕ್ತಿತ್ವ ವಿಕಸನ ಮುಂತಾದ ಉದಾತ್ತ ವಿಷಯಗಳನ್ನು ಹೊಂದಿರಬೇಕು. ಮಹಾಪುರುಷರ ಜೀವನ ಘಟನೆಗಳು, ರೋಚಕ ಕಥೆಗಳು, ಸತ್ಯ ಘಟನೆಗಳು, ಬೋಧಕ ಪುರಾಣ ಕಥೆಗಳು ಇವುಗಳನ್ನೂ ಸ್ವೀಕರಿಸಲಾಗುವುದು. ಬರಹವು ಫುಲ್‌ಸ್ಕೇಪ್ ಅಳತೆಯ ನಾಲ್ಕು ಪುಟಗಳನ್ನು ಮೀರಿರಬಾರದು. ಪ್ರಕಟನೆಗೆ ಸ್ವೀಕರಿಸುವುದು ಅಥವಾ ಬಿಡುವುದು ಮತ್ತು ಅಗತ್ಯ ಮಾರ್ಪಾಡುಗಳನ್ನು ಮಾಡುವಲ್ಲಿ ಸಂಪಾದಕರ ತೀರ್ಮಾನ ಅಂತಿಮ. – ಸಂ.